ಭಾರತಿ, 'ನಿನ್ನ, ಅಮಲು ಪೂರ್ತಿ ಇಳಿದಿಲ್ಲ ನೋಡು. ಅದಕ್ಕೆ ಹಗಲಿನಲ್ಲಿಯೂ ನಿದ್ದೆಗೆಡುವ ಸುದ್ದಿ ನಿನ್ನ ಬಾಯಿಂದ ಬರುತ್ತದೆ. ನನಗೂ ಹಾಲು ಹಾಕದ ಚಾ ಕುಡಿದು ಅಭ್ಯಾಸವಿದೆ. ನಿಂಬೆ ಹಣಿದರೆ ಹೇಳು. ಅದನ್ನು ಚಾ ಕೈ ಹಿಂಡುತ್ತೇನೆ. ನಿನ್ನ ಪಿತ್ತ ಇಳಿಯಬಹುದು' ಎಂದಳು.

"ಹೌದು, ಹೌದು ಈಗ ನೀನು ಬಂದ ಮೇಲೆ ನನಗೆ ಪಿತ್ತ ಸ್ವಲ್ಪ ನೆತ್ತಿಗೇರಿದೆ ಎಂದವನು ಅಡುಗೆ ಮನೆಯತ್ತ ಹೋದ ಅವನ ಹಿಂದೆ ಭಾರತಿಯೂ ಕೂಡಾ. ಭಾರತಿ ನಿಂಬೆ ಹಣ್ಣು ಕೊಟ್ಟು ಕುಡಿಯುವರತ್ನ ಯಾವಾಗಲೂ ನಿಂಬೆ ಹಣ್ಣು ಇದೆಯಾ ಅಂತ ಕೇಳಬೇಡ ಗೊತ್ತಾಯ್ತಾ? ಮಡಲು ಇದೆ. ಬೆಂಕಿ ಪೆಟ್ಟಿಗೆ ಒಲೆಕಟ್ಟೆಯ ಮೇಲೆ ಇದೆ. ಚಾ ಪಾತ್ರೆಯೂ ಇದೆ. ಇಕಾ ಇಲ್ಲಿ ಚಾ ಪುಡಿಯಿದೆ ಇನ್ನು ನೀನು ಏನು ಬೇಕೋ ಅದನ್ನು ಮಾಡು. ಅಷ್ಟು ಹೊತ್ತಿಗೆ ಹಲ್ಲುಜ್ಜಿ ಮುಖ ತೊಳೆದುಕೊಂಡು ಬರ್ತೇನೆ; ಎಂದು ಹೊರಗೆ ನಡೆದ. ಭಾರತಿ ಒಲೆ ಉರಿಸತೊಡಗಿದಳು. ಹಲ್ಲುಜ್ಜುವಾಗ ಅವನಿಗೆ ಪಿ.ಯು.ಸಿಯಲ್ಲಿ ನಡೆದ ಘಟನೆಯು ನೆನಪಿಗೆ ಬಂದಿತು. ಆಗವನು ತಾಳಮದ್ದಲೆಯಲ್ಲಿ ಅರ್ಥ ಹೇಳಲು ತೊಡಗಿದ್ದ. ಒಂದು ದಿನ ಅವನಿಗೆ ತಾಳಮದ್ದಳೆಯಲ್ಲಿ ಇಪ್ಪತ್ತೈದು ರೂಪಾಯಿ ಗೌರವ ಧನ ಸಿಕ್ಕಿತು. ಚಿಕ್ಕಪ್ಪನ ಮನೆಯಿಂದ ಪಿ.ಯು.ಸಿ.ಗೆ ಹೋಗುತ್ತಿದ್ದ. ತಾಳಮದ್ದಳೆಯ ಮೊದಲ ದುಡಿಮೆ. ಚಿಕ್ಕಪ್ಪನಿಗೆ ಕೊಡಲು ಹೋದ. ಚಿಕ್ಕಪ್ಪ 'ಅದರಲ್ಲಿ ಒಂದು ಶರಟನ್ನು ಹೊಲಿಸಿಕೋ' ಎಂದರು. ಅಂತೆಯೇ ಒಂದು ಕಾಫಿ ಕಲರ್ ಶರಟನ್ನು ಹೊಲಿಸಿಕೊಂಡ. ಮೊದಲಿನಿಂದಲೂ ಅವನಿಗೆ ಕಾಫಿ ಕಲರ್ ಇರುವ ಶರಟನ್ನು ಹೊಲಿಸಬೇಕೆಂದು ಆಸೆಯಿತ್ತು. ಅದನ್ನು ಹಾಕಿಕೊಂಡು ಹೋದ ದಿನ ಎಲ್ಲರೂ ಹೋದರು. ರಾಹುಲ ಸ್ವಲ್ಪ ಹಿಂದೆ ಉಳಿದ. ಪೆನ್ನು ಎಲ್ಲಿಯೋ ಬಿದ್ದುಹೋಗಿತ್ತು. ಅದನ್ನು ಡೆಸ್ಕಿನ ಕೆಳಗೆ ಹುಡುಕುತ್ತಿದ್ದ. ಸಡನ್ನಾಗಿ ಭಾರತಿ ಸಾಲಿಯಾನ್ ಬಂದಳು. ಆಗ ಸಾಮಾನ್ಯವಾಗಿ ಹುಡುಗರು ಹುಡುಗಿಯರ ಜೊತೆಗೆ ಹೆಚ್ಚು ಮಾತಾಡುತ್ತಿರಲಿಲ್ಲ. ಒಂದು ದಿನ ಕೀಟಲೆ ಮಾಡಿದ ಎಂದು ರಜಾಕ್ ಬಗ್ಗೆ ಪ್ರಿನ್ಸಿಪಾಲರಲ್ಲಿ ದೂರನ್ನು ಕೊಟ್ಟಿದ್ದಳು. ಅಂದಿನಿಂದ ಭಾರತಿ ತಂಟೆಗೆ ಯಾರೂ ಹೋಗುತ್ತಿರಲಿಲ್ಲ. ಅವಳು ಬಂದಾಗ ರಾಹುಲ ಗಾಬರಿಯಾದ, ಅವಳೇ 'ಏನು ಹುಡುಕುತ್ತಿದ್ದೀರಿ?' ಎಂದು ಕೇಳಿದಳು. ಅವನು ಹೇಳಿದ. ಅವಳೂ ಬಗ್ಗಿ ಹುಡುಕಿ ಕೊಟ್ಟಳು. ನಗಾಡಿ 'ಯಾಕೆ ನನ್ನನ್ನು ಕಂಡು ಗಾಬರಿಯಾದಿರಿ?' ಎಂದು ಕೇಳಿದಳು.

'ಇಲ್ಲ ಸಡನ್ನಾಗಿ ಬಂದಿರಲ್ಲಾ ಅದಕ್ಕೆ'

'ಓ ಹಾಗೆಯಾ, ಪೆನ್ನಿಗಾಗಿ ಇಷ್ಟು ಹುಡುಕುತ್ತೀರಲ್ಲಾ? ಕಳೆದು ಹೋದರೆ ಇನ್ನೊಂದು ತೆಗೆದುಕೊಂಡರೆ ಆಯಿತು.'

'ಅದು ಬ್ರೌನ್ ಕಲರ್ ಪೆನ್ನು. ಅದು ಅಂದರೆ ನನಗೆ ಇಷ್ಟ. ಮತ್ತೆ ತೆಗೆದುಕೊಳ್ಳುವುದು ಕಷ್ಟ', ಇದ್ದ ಪರಿಸ್ಥಿತಿಯನ್ನು ಹೇಳಿದ. ಅವನಿಗೆ ಕಷ್ಟವೂ ಇತ್ತು. ತರಗತಿಯಲ್ಲಿ ಇದ್ದದ್ದು ಇಬ್ಬರೇ. ಹೆಚ್ಚು ಹೊತ್ತು ಮಾತಾಡಿದರೆ ಮತ್ತೆ ಏನೇನೋ ಸುದ್ದಿಯಾಗುತ್ತದೆ ಎಂದು ಹೊರಟ. ಅವಳು 'ನಿಮ್ಮ ಶರ್ಟ್ ಚೆನ್ನಾಗಿದೆ. ನಿಮಗೆ ಒಪ್ಪುತ್ತದೆ. ಇಂಥದ್ದೇ ಇನ್ನೂ ಎರಡು ಮೂರು ಹೊಲಿಸಿಕೊಳ್ಳಿ' ಅಂದಳು.

'ಅದು ಆಗುವ ಹೋಗುವ ಸಂಗತಿಯು ಅಲ್ಲ. ಈಗ ಇರುವುದರಲ್ಲಿಯೇ ನಾನು ಸುಧಾರಿಸಿಕೊಳ್ಳಬೇಕು' ಎಂದ. ಅವಳು ನಗಾಡಿದಳು. ಅವಳೇ ಮುಂದೆ ಬಂದು 'ನನಗೆ ನೀವು ಅಂದರೆ ಇಷ್ಟ. ನಿಮ್ಮನ್ನು ಕಂಡರೆ ಖುಷಿಯಾಗುತ್ತದೆ. ನೀವು ಯಾರ ಸುದ್ದಿಗೂ ಹೋಗುವುದಿಲ್ಲ. ಅದಕ್ಕೆ ನಿಮ್ಮನ್ನು ಕಂಡರೆ ಇಷ್ಟವಾಗುತ್ತದೆ' ಎಂದು ಹೇಳಿದಳು. ಅವಳ ಮಾತಿನಲ್ಲಿ ಕಪಟವು ಇರಲಿಲ್ಲ. ಅಷ್ಟು ಹೇಳುವಾಗ ಮಾತ್ರ ಅವಳ ಮುಖ ಕೆಂಪಾಗಿತ್ತು. ಅವಳೇ ಮುಂದೆ ಬಂದು ಅವನಿಗೆ ಷೇಕ್ ಹ್ಯಾಂಡ್ ಕೊಟ್ಟಳು. ಮೃದುವಾದ ಕೈ. ಮರುವಾರ ಅದು ಶನಿವಾರ ಎಂದು ಕಾಣಿಸುತ್ತದೆ. ರಾಹುಲ ಒಬ್ಬನೇ ಇನ್ನೇನು ತರಗತಿಯ ಒಳಹೋಗಬೇಕು ಎನ್ನುವಾಗ ಅವಳು ಕ್ಲಾಸಿನ ಒಳಗೆ ಇದ್ದವಳು ತಕ್ಷಣ ಹೊರಗೆ ಬಂದು ಅವನ ಕೈಯಲ್ಲಿ ಒಂದು ಚೀಟಿಯನ್ನು ಕೊಟ್ಟಳು. ಅದನ್ನು ಕಿಸೆಯ ಒಳಗೆ ಹಾಕಿಕೊಂಡ. ಟಾಯ್ಲೆಟಿಗೆ ಹೋಗಿ ಓದಿದ 'ಕ್ಲಾಸ್ ಬಿಟ್ಟ ಮೇಲೆ ಕ್ಲಾಸಿನಲ್ಲಿಯೇ ಇರಿ ಎಲ್ಲರೂ ಹೋಗುವ ತನಕ' ಎಂದು ಬರೆದಿದ್ದಳು. ಆ ದಿನ ಅವನಿಗೆ ಕ್ಲಾಸ್ ಕೇಳುವ ಉತ್ಸಾಹವೇ ಇರಲಿಲ್ಲ. ಎಲ್ಲರೂ ಕ್ಲಾಸ್ ಬಿಟ್ಟು ಹೋದ ಮೇಲೆ ಅವಳು ಅವಳ ಫ್ರೆಂಡನ್ನು ಬಿಟ್ಟು ತರಗತಿಯೊಳಗೆ ಬಂದಳು.

'ಬೇರೆ ಏನೇನೋ ಯೋಚನೆ ಮಾಡಿರಬೇಕಲ್ಲಾ, ಹಾಗೇನೂ ಇಲ್ಲ. ನನಗೆ ನೀವು ಇಷ್ಟಾಂತ ಹೇಳಿದ್ದೆ. ಅದರಲ್ಲಿ ಬೇರೆ ಅರ್ಥ ಇಲ್ಲ. ನಿಮಗೆ ಬ್ರೌನ್ ಕಲರ್ ಪೆನ್ನು ಇಷ್ಟಾಂತ ತೆಗೆದುಕೊಂಡು ಬಂದಿದ್ದೇನೆ ಇದು ನನ್ನ ಗಿಫ್ಟ್ ಖಂಡಿತಾ ತೆಗೆದುಕೊಳ್ಳಿ' ಕೊಟ್ಟಳು. ಪಾರ್ಕರ್ ಪೆನ್ನು. ಚೆನ್ನಾಗಿತ್ತು. ಅವನಿಗೆ ಸಂತೋಷವಾಯಿತು.

'ಯಾರಿಗೂ ಹೇಳ್ಬೇಡಿ ಸುಮ್ಮನೆ ಸುದ್ದಿ ಮಾಡ್ತಾರೆ. ನಾನು ನಿಮ್ಮ ಫ್ರೆಂಡ್ ಇನ್ನೊಮ್ಮೆ ಸಿಗ್ತೇನೆ' ಎಂದು ಹೊರಟು ಹೋದಳು. ಅದನ್ನು ಅವನು ಜೋಪಾನವಾಗಿ ಬಳಸುತ್ತಿದ್ದ. ಆ ಮೇಲೆ ಅವರಿಬ್ಬರೂ ತುಂಬಾ ಸರ್ತಿ ಮಾತಾಡಿದ್ದರು. ಆದರೆ ಏಕಾಂತದಲ್ಲಿ ಅಲ್ಲ. ಅವನನ್ನು ನೋಡಿದರೆ ತುಂಬು ನಗೆ ಅವಳಿಗೆ. ಅವನಿಗೂ ಅಷ್ಟೆ. ಆ ಮೇಲೆ ಇವತ್ತು ಎಷ್ಟೋ ವರ್ಷಗಳ ತರುವಾಯ ದಿಢೀರನೆ ಬಂದಿದ್ದಾಳೆ.!

***

ಅಷ್ಟು ಹೊತ್ತಿಗೆ ಮತ್ತೆ ಮಳೆಯು ಶುರುವಾಯಿತು. ರಾಹುಲ ಮತ್ತು ಭಾರತಿ ಚಾ ಕುಡಿಯುತ್ತಾ ಮಾತುಕತೆಗೆ ಪ್ರಾರಂಭ ಮಾಡಿದರು. ದೊಡ್ಡ ಮಳೆಯಾದ್ದರಿಂದ ಹಗಲಿಗೂ ಇರುಳು ಬಂದಂತೆ ಆಗಿತ್ತು. ರಾಹುಲ ಮುಖ ತೊಳೆದು ಬರುವಾಗ ಭಾರತಿ ಅವಲಕ್ಕಿ ಒಗ್ಗರಣೆ ಮತ್ತು ಚಾ ಎರಡೂ ಮಾಡಿಯಾಗಿತ್ತು. ರಾಹುಲ ಅವಲಕ್ಕಿಗೆ ಸ್ವಲ್ಪ ಚಾ ಹಾಕುತ್ತಾ ಅದನ್ನು ತಿನ್ನುತ್ತಾ ಏನು; ಮಾರಾಯ್ತಿ – ವಿಶೇಷ?; ಎಂದು ಕೇಳಿದ. ಅದರ ಭಾವಾರ್ಥ ಭಾರತಿ ಗೊತ್ತಾಯಿತು. 'ಇರುವುದನ್ನು ಹಾಗೆ ಕೇಳುವುದಪ್ಪ ಯಾಕೆ ಬಂದೆ ಅಂತ ತಾನೆ?'

'ಹಾಗಲ್ಲ ನೀನು ಯಾಕೆ ಬಂದೆ ಅಂತಲ್ಲ, ಅಪರೂಪಕ್ಕೆ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾದೆಯಲ್ಲ ಅದಕ್ಕೆ' ಎಂದ ರಾಹುಲ ಚಾ ಕುಡಿದ.

"ರಾಹುಲ ನಿಜವಾಗಿ ಹೇಳಬೇಕೆಂದರೆ ನಿನ್ನನ್ನು ನೋಡಬೇಕೆಂದು ಅನಿಸಿತು. ಅದಕ್ಕಿಂತ ಹೆಚ್ಚಾಗಿ ಆ ಮೂಲ್ಕಿಯಲ್ಲಿ ಇದ್ದು ಇದ್ದು ಸಾಕಾಯಿತು. ದಿನಾ ಬೆಳಿಗ್ಗೆಯೇಳುವುದು. ಆಫೀಸಿಗೆ ಓಡುವುದು. ಸಂಜೆ ಬರುವುದು. ಮೂಲ್ಕಿ ಹೇಳಿ ಕೇಳಿ ಸಣ್ಣ ಊರು. ನಾನೊಬ್ಬಳೇ ಇದ್ದರೆ ಅದಕ್ಕೆ ಬೇರೆ ಬೇರೆ ಅರ್ಥ ಬರುತ್ತದೆ. ಜನ ಒಂದು ರೀತಿ ನೋಡುತ್ತಾರೆ. ಹಿಂದಿನಿಂದ ಗಂಡನನ್ನು ಬಿಟ್ಟು ಬಂದವಳು ಅಂತ ಹೇಳುತ್ತಿರುತ್ತಾರೆ. ನೀವು ಗಂಡಸರು ಏನೂ ಮಾಡಿದರೂ ಸರಿ. ನಾವು ಮಾತ್ರ ಏನೂ ಮಾಡುವ ಹಾಗಿಲ್ಲ. ನೋಡು ನಿನ್ಗೆ ಬೇಜಾರಾದ್ರೆ ಬೇಜಾರಾದ ಅಂತ ಏನೂ – ಬೇಜಾರಾಗದಿದ್ದರೂ ಒಂದೊಂದು ಕೊಡ ಕುಡ್ದು ಸಿಗರೇಟು ಎಳೆದುಕೊಂಡು ಇದ್ದೀಯಾ ನಮ್ಮ ಹಾಗೆಯಾ?" ಭಾರತಿ ಮರು ಪ್ರಶ್ನೆ ಹಾಕಿದಳು. "ನೋಡು, ಮತ್ತೆ ಒಂದು ಪ್ರಶ್ನೆ, ಎಲ್ಲದಕ್ಕೂ ನೀವು ಗಂಡಸರು ನಾವು ಹೆಂಗಸರು ಎಂದು ಹೇಳುವುದು ಬಿಡು. ನಿನ್ನ ಒಬ್ಬ ದಿವಾಕರ ಜಗತ್ತಿನ ಎಲ್ಲಾ ಗಂಡಸರ ಪ್ರತಿನಿಧಿಯಲ್ಲ. ಹಾಗೇ ನಾನೂ ಕೂಡಾ. ಜಗತ್ತಿನ ಎಲ್ಲಾ ಗಂಡಸರ

